**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1336(1546) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 17.03.2026 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯ ಸುರತ್ಕಲ್ ವಲಯ (1994 ರಿಂದ ಪಾಲಿಕೆ ವ್ಯಾಪ್ತಿಗೆ ಸೇರಿರುವ ಪ್ರದೇಶ)ದಲ್ಲಿ ನಾಗರೀಕರು ತೆರಿಗೆ ಪಾವತಿಸುತ್ತಿದ್ದರೂ ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿ ಕಲ್ಪಿಸದಿರುವ ಬಗ್ಗೆ ಸ್ಥಳೀಯರು ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು: | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುರತ್ಕಲ್ ವಲಯದದಲ್ಲಿ ಕ್ವಿಮಿಪ್ ಯೋಜನೆಯಡಿ-1.0 ನೆರವಿನೊಂದಿಗೆ ತಾಂತ್ರಿಕವಾಗಿ ಕಾರ್ಯಸಾಧುವಿರುವಂತೆ ಹಾಲಿ ಒಳಚರಂಡಿ ವ್ಯವಸ್ಥೆಯ ಸಮಸ್ಯೆಯ ಪರಿಹಾರಕ್ಕಾಗಿ ರೂ. 38.19 ಕೋಟಿ ವೆಚ್ಚದಲ್ಲಿ ಈ ಕೆಳಗಿನಂತೆ ಪುನಶ್ಚೇತನ ಕಾಮಗಾರಿಗಳನ್ನು 2018-2023 ರ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗಿದೆ.<br><br>ಲ್ಯಾಟರೈಟ್ ಮೆಷಿನ್ ಗುಂಡಿಗಳ (Machine hole) ಜಾಗದಲ್ಲಿ ಆರ್.ಸಿ.ಸಿ ಮೆಷಿನ್ ಗುಂಡಿಗಳ ((Machine hole) ನಿರ್ಮಾಣ 713 ಸಂಖ್ಯೆ.<br><br>ಮೆಷಿನ್ ಗುಂಡಿಗಳ (Machine hole) ದುರಸ್ತಿ - 355 ಸಂಖ್ಯೆ ಮಿಸ್ಸಿಂಗ್ ಲಿಂಕ್ ಕಾಮಗಾರಿ - 1.85 ಕಿ.ಮೀ<br><br>ವೆಟ್‌ವೆಲ್‌ಗಳ ಯಂತ್ರೋಪಕರಣಗಳ ದುರಸ್ತಿ ಕಾಮಗಾರಿ – 3. ಒಳಚರಂಡಿ ಕೊಳವೆ ಜಾಲ ಪರಿಶೀಲನೆ ಹಾಗೂ ಚಾಲನ - 111 ಕಿ ಮೀ.<br><br>ಮೇಲಿನ ಯೋಜನೆಯಡಿ ಸುರತ್ಕಲ್ ವಲಯದ ಇಡ್ಯಾ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯ ಪುನಶ್ಚೇತನಕ್ಕಾಗಿ ಗುತ್ತಿಗೆ ಕರಾರಿನಲ್ಲಿ ರೂ.5.00 ಕೋಟಿ ಮೊತ್ತದಲ್ಲಿ, ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸ ಉದ್ದೇಶಿಸಲಾಗಿತ್ತು.<br><br>ಲ್ಯಾಟರೈಟ್ ಮೆಷಿನ್ ಗುಂಡಿಗಳ (Machine hole)ಜಾಗದಲ್ಲಿ ಆರ್.ಸಿ.ಸಿ ಮೆಷಿನ್ ಗುಂಡಿಗಳ (Machine hole) ನಿರ್ಮಾಣ - 111 ಸಂಖ್ಯೆ.<br><br>ಮೆಷಿನ್ ಗುಂಡಿಗಳು (Machine hole) ಗಳ ದುರಸ್ತಿ 15 ಸಂಖ್ಯೆ.<br>ಮಿಸ್ಸಿಂಗ್ ಲಿಂಕ್ ಕಾಮಗಾರಿ-0.55 ಕಿ.ಮೀ.<br>ವೆಟ್‌ವೆಲ್ ಯಂತ್ರೋಪಕರಣಗಳ ದುರಸ್ತಿ ಕಾಮಗಾರಿ- 1 ಸಂಖ್ಯೆ<br><br>ಒಳಚರಂಡಿ ಕೊಳವೆ ಜಾಲವನ್ನು ಪರಿಶೀಲಿಸಿ ಚಾಲನೆ |

| | | |
|---|---|---|
| | | ಮಾಡುವುದು 5.00 ಕಿ.ಮೀ.<br><br>ಧೀರ್ಘ ಕಾಲದವರೆಗೆ (2021 ರಿಂದ 2023 ರವರೆಗೆ) ಸ್ಥಳೀಯರ ವಿರೋದದ ಕಾರಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಿರುವುದಿಲ್ಲ.<br><br>ಆದ್ದರಿಂದ ಮಹಾನಗರ ಪಾಲಿಕೆಯ ದಿನಾಂಕ 23.10.2020 ರ ಪತ್ರದಲ್ಲಿನ ಕೋರಿಕೆಯಂತೆ, ಸುರತ್ಕಲ್ ವಲಯದ ಮಾಧವನಗರ 16.50 ಎಂ.ಎಲ್.ಡಿ ಸಾಮರ್ಥ್ಯದ ತ್ಯಾಜ್ಯ ಸಂಸ್ಕರಣಾ ಘಟಕ (STP) ಹಾಗೂ 3 ವೆಟ್ ವೆಲ್ ಗಳ ವಿದ್ಯುತ್ ಮತ್ತು ಯಂತ್ರೋಪಕರಣಗಳ ದುರಸ್ತಿಯನ್ನು ಇಡ್ಯಾ ಪ್ರದೇಶದ ಒಳಚರಂಡಿಯ ವ್ಯವಸ್ಥೆಯ ಪುನರುಜ್ಜೀವನಕ್ಕಾಗಿ ಕಾಯ್ದಿರಿಸಿದ ರೂ. 5.00 ಕೋಟಿ ಮೊತ್ತದಲ್ಲಿ ಅನುಷ್ಠಾನಗೊಳಿಸಿದ್ದು,ಮೇಲಿನ ಎಲ್ಲಾ ಕಾಮಗಾರಿಗಳನ್ನು ದಿನಾಂಕ: 31.03.2023 ರಲ್ಲಿ ಪೂರ್ಣ ಗೊಳಿಸಿ ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿದೆ.<br><br>ಇಡ್ಯಾ ಪ್ರದೇಶದಲ್ಲಿ ಒಳಚರಂಡಿ ವ್ಯವಸ್ಥೆಯ ಸಮಸ್ಯೆಯ ಪರಿಹಾರಕ್ಕಾಗಿ ದಿನಾಂಕ 07.06.2024 ರಂದು ಜರುಗಿದ ಭರವಸೆ ಸಮಿತಿ ಸಭೆಯ ನಿರ್ದೇಶನದಂತೆ ಸರ್ಕಾರ ಆದೇಶ ಸಂಖ್ಯೆ:ನಅಇ 78 ಪಿಆರ್‌ಜೆ 2024, ದಿನಾಂಕ:18.06.2024ರಲ್ಲಿ ಡಾ\|\|ಎಂ.ಎಸ್. ಮೋಹನ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು, ಐ.ಐ.ಎಸ್.ಸಿ ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ 3 ಜನರ ತಜ್ಞರ ತಾಂತ್ರಿಕ ಸಮಿತಿಯನ್ನು ನೇಮಿಸಿದ್ದು, ಸದರಿ ಸಮಿತಿಯು ಈ ಕೆಳಗಿನಂತೆ ಶಿಫಾರಸ್ಸುಗಳನ್ನು ಮಾಡಿರುತ್ತದೆ.<br><br>i) Forced ventilation system shall be provided.<br>ii) Diffused aeration system shall be provided in the Iddya wet well so as to avoid septic conditions.<br>iii) Provision for Captive power or dedicated power supply shall be provided for Iddya. |
| ಆ) | ಸುರತ್ಕಲ್ ವಲಯದಲ್ಲಿ ಒಳಚರಂಡಿ ಜಾಲ (UGD) ವ್ಯವಸ್ಥೆ ವಿಸ್ತರಣೆಗಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳೇನು: ಇದುವರೆಗೆ ಎಷ್ಟು ಮನೆಗಳಿಗೆ ಸಂಪರ್ಕ ಕಲ್ಪಿಸಲಾಗಿದೆ; ಬಾಕಿ ಇರುವ ಪ್ರದೇಶಗಳಿಗೆ ಯಾವ ಕಾಲಮಿತಿಯೊಳಗೆ ವ್ಯವಸ್ಥೆ ಕಲ್ಪಿಸಲಾಗುವುದು. | ಸುರತ್ಕಲ್ ವಲಯದಲ್ಲಿ ಒಳಚರಂಡಿ ಜಾಲ (UGD) ವ್ಯವಸ್ಥೆ ವಿಸ್ತರಣೆಗಾಗಿ ಎ.ಡಿ.ಬಿ (Asian Development Bank) ನೊಂದಿಗೆ ಕುಡ್ಸೆಂಪು ಯೋಜನೆಯಡಿಯಲ್ಲಿ ಸಮಗ್ರ ಮಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ 2026ರ ವರೆಗಿನ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಹೊಸದಾಗಿ ಒಳಚರಂಡಿ ಯೋಜನೆಯ ನಕ್ಷೆಯನ್ನು ತಯಾರಿಸಿ ಕಾಮಗಾರಿಯನ್ನು ರೂ.218.00 ಕೋಟಿಗಳ ವೆಚ್ಚದಲ್ಲಿ 2003 ರಿಂದ ಕೈಗೆತ್ತಿಗೊಂಡು 2014ರಲ್ಲಿ ಮುಕ್ತಾಯಗೊಳಿಸಲಾಗಿರುತ್ತದೆ.<br><br>ಸುರತ್ಕಲ್ ಪ್ರದೇಶದ ಒಳಚರಂಡಿ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರಕಾರ ಪುರಸ್ಕೃತ ಅಮೃತ-1 ಯೋಜನೆಯಲ್ಲಿ ರೂ.33.00 ಕೋಟಿ ಅನುದಾನದಲ್ಲಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಅಂತಿಮ ಹಂತದಲ್ಲಿರುತ್ತದೆ.<br><br>ವೆಟ್ವೆಲ್ (ಇಡ್ಯಾ) ಇದರಲ್ಲಿ ಸಾರ್ವಜನಿಕರ ಆಕ್ಷೇಪಣೆ ಹಾಗೂ ಭರವಸೆ ಸಮಿತಿಯಲ್ಲಿ ಈ ವಿಷಯವು ಇತ್ಯರ್ಥವಾಗದ ಕಾರಣ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವುದಿಲ್ಲ. |

| | | |
|---|---|---|
| | | ಮಂಗಳೂರು ಮಹಾನಗರಪಾಲಿಕೆಯಿಂದ ಸಾರ್ವಜನಿಕ ಹಾಗೂ ಚುನಾಯಿತ ಪ್ರತಿನಿಧಿಗಳ ಕೋರಿಕೆಯಂತೆ ಒಳಚರಂಡಿ ವಿಸ್ತರಣೆ ಕಾಮಗಾರಿಯನ್ನು ಅನುದಾನದ ಲಭ್ಯತೆಯ ಮೇರೆಗೆ ಕೈಗೊಳ್ಳಲಾಗುತ್ತದೆ.<br><br>ಇದುವರೆಗೆ 475 ಮನೆಗಳಿಗೆ ಅಧಿಕೃತ ಸಂಪರ್ಕ ಕಲ್ಪಿಸಲಾಗಿದೆ. ಬಾಕಿ ಇರುವ ಪ್ರದೇಶಗಳಿಗೆ ಅಮೃತ್-1.0 ಕಾಮಗಾರಿಯು ಮುಕ್ತಾಯವಾದ ನಂತರ ಹಾಗೂ ಹೊಸ ಪ್ರದೇಶಗಳಿಗೆ ಅನುದಾನದ ಲಭ್ಯತೆಯ ಮೇರೆಗೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. |
| ಇ) | ಮಂಗಳೂರು ನಗರದಲ್ಲಿನ ಪ್ರಮುಖ ಸಾರ್ವಜನಿಕ ಸ್ಥಳಗಳು ಬಸ್ ನಿಲ್ದಾಣ, ಹಂಪನಕಟ್ಟೆ, ಕದ್ರಿ, ಕಂಕನಾಡಿ, ಸ್ಟೇಟ್ ಬ್ಯಾಂಕ್ ಪ್ರದೇಶ ಸೇರಿದಂತೆ ಹಲವೆಡೆ ಸಾರ್ವಜನಿಕ ಶೌಚಾಲಯಗಳು ಉಪಯೋಗಿಸದ ಸ್ಥಿತಿಯಲ್ಲಿ ಇರುವುದು, ಕೆಲವೆಡೆ ಬೀಗ ಹಾಕಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಯಾವಾಗ ನವೀಕರಿಸಲಾಗುವುದು: | ಮಂಗಳೂರು ನಗರದಲ್ಲಿನ ಪ್ರಮುಖ ಸಾರ್ವಜನಿಕ ಸ್ಥಳಗಳು ಬಸ್ ನಿಲ್ದಾಣ, ಹಂಪನಕಟ್ಟೆ, ಕದ್ರಿ, ಕಂಕನಾಡಿ, ಸ್ಟೇಟ್ ಬ್ಯಾಂಕ್ ಪ್ರದೇಶ ಸೇರಿದಂತೆ ಹಲವೆಡೆ ಸಾರ್ವಜನಿಕ ಶೌಚಾಲಯಗಳ ನಿರ್ವಹಣೆಯನ್ನು ಟೆಂಡರ್ ಪ್ರಕ್ರಿಯೆಯ ಹೊರಗೆ ಸಂಸ್ಥೆಯ ಮುಖಾಂತರ ಹಾಗೂ ಪಾಲಿಕೆಯ ಪೌರಕಾರ್ಮಿಕರ ಮುಖಾಂತರ ನಿರ್ವಹಿಸಲು ಕ್ರಮ ವಹಿಸಲಾಗುತ್ತಿದೆ ಹಾಗೂ ದುರಸ್ತಿಯಲ್ಲಿರುವ ಶೌಚಾಲಯಗಳಿಗೆ ಬೀಗಹಾಕಲಾಗಿದ್ದು, ಅವುಗಳನ್ನು ಶೀಘ್ರದಲ್ಲಿ ಪಾಲಿಕೆ ವತಿಯಿಂದ ದುರಸ್ತಿಗೊಳಿಸಲಾಗುವುದು. |
| ಈ) | ಮಹಾನಗರ ಪಾಲಿಕೆ ಮಾರುಕಟ್ಟೆಗಳು ಮತ್ತು ವಾಣಿಜ್ಯ ಸಂಕೀರ್ಣಗಳಲ್ಲಿ ಪ್ರತಿಯೊಂದು ಮಹಡಿಯಲ್ಲಿ ಸಾಕಷ್ಟು ಸಂಖ್ಯೆಯ ಸಾರ್ವಜನಿಕ ಶೌಚಾಲಯಗಳಿವೆಯೇ; ಇಲ್ಲದಿದ್ದರೆ ಅದಕ್ಕೆ ಕಾರಣವೇನು; ಇವುಗಳ ನಿರ್ವಹಣೆ, ಮೂಲಸೌಲಭ್ಯ ಒದಗಿಸುವ ಜವಾಬ್ದಾರಿ ಯಾರದು: ನಿಯಮಿತ ಮೇಲ್ವಿಚಾರಣೆ ನಡೆಸಲಾಗುತ್ತಿದೆಯೇ: ಶೌಚಾಲಯಗಳಿವೆಯೇ: | ಮಂಗಳೂರು ಮಹಾನಗರ ಪಾಲಿಕೆಯ ಉರ್ವ ಮಾರುಕಟ್ಟೆ, ಕಾವೂರು ಮಾರುಕಟ್ಟೆಯಲ್ಲಿರುವ ಶೌಚಾಲಯ ಹಾಗೂ ಮ.ನ.ಪಾ.ದ ಲಾಲ್ ಭಾಗ್ ಮತ್ತು ವಾಣಿಜ್ಯ ಸಂಕೀರ್ಣದ ನಿರ್ವಹಣೆಯನ್ನು ಹೊರಗುತ್ತಿಗೆ ಕಾರ್ಮಿಕರ ಮುಖಾಂತರ ಹಾಗೂ ಇನ್ನುಳಿದ ಮಾರುಕಟ್ಟೆಯ ಶೌಚಾಲಯಗಳನ್ನು ಪಾಲಿಕೆಯ ಪೌರಕಾರ್ಮಿಕರ ಮುಖಾಂತರ ಪ್ರಸ್ತುತ ನಿರ್ವಹಣೆ ಮಾಡಲಾಗುತ್ತಿದೆ. |
| ಉ) | ನಗರ ನೈರ್ಮಲ್ಯ ಮತ್ತು ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ಒಳಚರಂಡಿ ನಿರ್ಮಿಸಲು ಹಾಗೂ ಹೊಸ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ ಇಡೀ ವ್ಯವಸ್ಥೆಯನ್ನು ಸಮಗ್ರವಾಗಿ ಸುಧಾರಿಸಲು ಸರ್ಕಾರ ರೂಪಿಸಿರುವ ಕಾಲಮಿತಿಯ ಕಾರ್ಯಯೋಜನೆಗಳೇನು? | ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಲು ಅಮೃತ್ ಯೋಜನೆಯಲ್ಲಿ 155.00 ಕೋಟಿ ವೆಚ್ಚದಲ್ಲಿ ಕಾಮಗಾರಿಗಳನ್ನು KUIDFC ಇಲಾಖೆಯಿಂದ ಕೈಗೆತ್ತಿಕೊಳ್ಳಲಾಗಿದ್ದು ಬಹುತೇಕ ಪೂರ್ಣಗೊಂಡಿರುತ್ತದೆ.<br><br>NGT ಅನುದಾನದಲ್ಲಿ ರೂ.40.00 ಕೋಟಿ ವೆಚ್ಚದಲ್ಲಿ ಪಚ್ಚನಾಡಿ ಮತ್ತು ಬಜಾಲ್ ಸಂಸ್ಕರಣಾ ಘಟಕಗಳ ಮೇಲ್ದರ್ಜೆಗೇರಿಸುವ ಕಾಮಗಾರಿ, ಅತ್ತಾವರದಲ್ಲಿ 1 ಹೊಸ ವೆಟ್ ವೆಲ್ ನಿರ್ಮಾಣ ಮತ್ತು ಪಾಲಿಕೆಯ ವ್ಯಾಪ್ತಿಯಲ್ಲಿನ ಹಾನಿಗೊಂಡ 8.5 ಕಿ.ಮೀ ಹಳೆಯ ಮುಖ್ಯ ಒಳಚರಂಡಿ ಕೊಳವೆ ಮರು ನಿರ್ಮಾಣದ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂ: ನಅಇ 229 ಸಿಎಸ್‌ಎಸ್ 2021 (ಭಾ-1)(1),ದಿನಾಂಕ:23-01-2026 ರನ್ವಯ ಪಾಲಿಕೆ ವ್ಯಾಪ್ತಿಯಲ್ಲಿ ವಿವಿಧ ಸ್ಥಳಗಳಲ್ಲಿ ಒಟ್ಟು 84 ಸೀಟುಗಳ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರದಿಂದ ಅನುಮೋದನೆ ನೀಡಿದ್ದು, ಪ್ರಸ್ತುತ ಸ್ಥಳ ಗುರುತಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ನಅಇ 27 ಎಂಎಂಸಿ 2026 (ಇ)**

**(ಬಿ.ಎಸ್.ಸುರೇಶ್)**
**ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು**